# ಶಿಕ್ಷಣದ ಲಭ್ಯತೆಯನ್ನು ಪುನರ್‌ಕಲ್ಪಿಸುವುದು

## ನೀತಿನಿಯಮದ ಸಂಕ್ಷಿಪ್ತ ವರದಿ– ಸಂಖ್ಯೆ ೧, ಮಾರ್ಚ್ ೨೦೦೮

ಅಭಿವೃದ್ಧಿಯ ವ್ಯಾಖ್ಯೆಯ ಒಂದು ಭಾಗವಾಗಿರುವ ಬಡತನವನ್ನು ತಗ್ಗಿಸುವ ಪ್ರಕ್ರಿಯೆಯ ಆದಿಯಲ್ಲಿ ಶಿಕ್ಷಣದ ಲಭ್ಯತೆಯನ್ನು ನೋಡಬಹುದು. ದಾಖಲಾತಿ ಪ್ರಮಾಣಗಳನ್ನು ಆಧರಿಸಿ ಲಭ್ಯತೆಯ ವಿಶಾಲವಾದ ದೃಷ್ಟಿಯು ನೀತಿಯ ಸಂವಾದವನ್ನು ಬೇರೆಡೆಗೆ ಒಯ್ಯುತ್ತದೆ. ಅಂತೆಯೇ ಶಾಲೆಗಳು, ಸ್ಥಳೀಯ ಅಧಿಕಾರಿಗಳು, ಸಮುದಾಯಗಳು, ಕುಟುಂಬಗಳು ಮತ್ತು ವ್ಯಕ್ತಿಗಳ ನಡುವಿನ ಸಂಪರ್ಕದಿಂದ ಹಾಗೂ ಲಭ್ಯತೆಯನ್ನು ಏಳು ವಲಯಗಳಲ್ಲಿ ವಿಂಗಡಿಸುವುದರಿಂದ ಈ ಸಂವಾದಕ್ಕೊಂದು ಹೊಸ ರೂಪ ದೊರೆಯುತ್ತದೆ. ಕ್ರಿಯೇಟ್ (CREATE) ಮಾರ್ಗಸೂಚಿಗಳಾದ ಸಂಶೋಧನೆಯ ವಿದ್ವತ್ಪೂರ್ಣ ಪ್ರಬಂಧದ ಲಭ್ಯತೆ, ಲಭ್ಯತೆಯನ್ನು ಅಭಿವೃದ್ಧಿಗೊಳಿಸುವುದು, ಶಿಕ್ಷಣದಲ್ಲಿ ನ್ಯಾಯಸಮ್ಮತಿ ಮತ್ತು ಪರಿವರ್ತನೆಗಳ ನೀತಿಯನ್ನು ಈ ಲೇಖನವು ಆಧರಿಸಿದೆ. (Creating a Research Agenda (Lewin, 2007) ಸಂಶೋಧನೆಯ ಕಾರ್ಯಸೂಚಿಯನ್ನು ರಚಿಸುವುದು (ಲೆವಿನ್, ೨೦೦೭).

### ಶಿಕ್ಷಣದ ಲಭ್ಯತೆಯು ಏಕೆ ಮುಖ್ಯವಾಗಿದೆ?

ಶಿಕ್ಷಣದ ಲಭ್ಯತೆಯು ಅಭಿವೃದ್ಧಿಯ ಹೃದಯಭಾಗವಾಗಿದೆ ಮತ್ತು ಈ ಯುಗದ ಅಭಿವೃದ್ಧಿಯ ಗುರಿಗಳಿಗೆ ಮೂಲವೂ ಆಗಿದೆ. ಶಿಕ್ಷಣದ ಕೊರತೆ ಎಂದರೆ ಬಡತನದ ವ್ಯಾಖ್ಯೆ ಹಾಗೂ ಅದನ್ನು ತಗ್ಗಿಸುವ ಒಂದು ಅಂಗವಾಗಿದೆ. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ, ಪ್ರಾಥಮಿಕೋತ್ತರ ಹಂತದ ಶಿಕ್ಷಣ ಮತ್ತು ತರಬೇತಿಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ಭಾಗವಹಿಸುವಿಕೆ ಮತ್ತು ಹೆಣ್ಣುಮಕ್ಕಳು ಹಾಗೂ ದುರ್ಬಲ ವರ್ಗದ ಮಕ್ಕಳಿಗೆ ಶಿಕ್ಷಣದ ಲಭ್ಯತೆಯನ್ನು ಅಭಿವೃದ್ಧಿಗೊಳಿಸುವುದು, ಈ ಸಾಧನೆಗಳು ಬಡತನವನ್ನು ತಗ್ಗಿಸುವ ವಿಷಯದಲ್ಲಿ ಅವಶ್ಯಕವಾಗಿವೆ. ಅರ್ಥಪೂರ್ಣ ಮೂಲ ಶಿಕ್ಷಣವನ್ನು ಪಡೆದುಕೊಳ್ಳುವುದು ಒಂದು ಪ್ರತಿಷ್ಠಾಪಿತ ಮಾನವ ಹಕ್ಕಾಗಿದೆ. ಉತ್ಪಾದನೆಯಲ್ಲಿ ದೀರ್ಘಕಾಲೀನ ಸುಧಾರಣೆಗಳು, ಅಂತರ್–ಪೀಳಿಗೆಗಳಲ್ಲಿ ಬಡತನದ ಆವರ್ತನಗಳನ್ನು ತಗ್ಗಿಸುವಿಕೆ, ಜನಸಂಖ್ಯೆಯಲ್ಲಿ ಸ್ಥಿತ್ಯಂತರ, ನಿರೋಧಕ ಆರೋಗ್ಯ ಸಂರಕ್ಷಣೆ, ಸ್ತ್ರೀ ಸಬಲೀಕರಣ ಮತ್ತು ಅಸಮಾನತೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿಯೂ ಇದು ನಿರ್ಣಾಯಕವಾಗಿದೆ. ಶೈಕ್ಷಣಿಕ ವ್ಯವಸ್ಥೆಗಳ ಮೂಲಕ ಪಡೆದಂತಹ ಶಿಕ್ಷಣ ಮತ್ತು ಕೌಶಲಗಳು ಸದಾಕಾಲ

ಅಲ್ಲದಿದ್ದರೂ ಅನೇಕ ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿ, ರಾಜ್ಯ ಮತ್ತು ರಾಷ್ಟ್ರಗಳ ಅಭಿವೃದ್ಧಿಯ ನಿರೀಕ್ಷೆಗಳನ್ನು ಬದಲಿಸುವ ಸಾಮರ್ಥ್ಯವನ್ನು ಹೊಂದಿರುತ್ತವೆ.

ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ೭೫ ಮಿಲಿಯನ್ ಮಕ್ಕಳು ಪ್ರಾಥಮಿಕ ಶಾಲೆಯಲ್ಲಿ ದಾಖಲಾತಿಯನ್ನು ಹೊಂದಿರುವುದಿಲ್ಲ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ನಿಯತವಾಗಿ ಶಾಲೆಗೆ ಹಾಜರಾಗುವಲ್ಲಿ ವಿಫಲವಾಗುತ್ತಾರೆ ಅಥವಾ ಅವರು ಮೂಲ ಕೌಶಲಗಳನ್ನು ಹೊಂದಿದ್ದಾರೆಂದು ಸೂಚಿಸುವಂತಹ ಮಟ್ಟವನ್ನು ತಲುಪಿಲ್ಲ. ಕನಿಷ್ಠ ೨೫೦ ಮಿಲಿಯನ್ ಮಕ್ಕಳು ಮಾಧ್ಯಮಿಕ ಶಿಕ್ಷಣ ಅಥವಾ ಅದಕ್ಕೆ ಸಮಾನವಾಗಿರುವ ೯ನೇ ವರ್ಗಕ್ಕೆ ಮೇಲ್ಪಟ್ಟ ಶಿಕ್ಷಣವನ್ನು ಪಡೆಯುತ್ತಿಲ್ಲ. ಆರಂಭಿಕ ಹಂತದಲ್ಲಿ ಉಂಟಾದ ಸೌಕರ್ಯಗಳ ಕೊರತೆಯು ದೀರ್ಘಕಾಲೀನ ಪರಿಣಾಮವನ್ನು ಉಂಟುಮಾಡುತ್ತದೆ ಮತ್ತು ಭವಿಷ್ಯದಲ್ಲಿನ ಸಾಧನೆ ಮತ್ತು ಬೆಳವಣಿಗೆಗಳ ಮೇಲೆ ಪ್ರಭಾವ ಬೀರುತ್ತದೆ ಎಂಬುದನ್ನು ಕುರಿತು ಸಾಕಷ್ಟು ಸಾಕ್ಷ್ಯಗಳಿದ್ದರೂ ಶಾಲಾಪೂರ್ವ ಅವಕಾಶಗಳನ್ನು, ನಿಖರವಾಗಿ ಗೊತ್ತಿಲ್ಲದಿದ್ದರೂ, ಬಹಳ ಮಕ್ಕಳು ಕಳೆದುಕೊಳ್ಳುತ್ತಿದ್ದಾರೆ.

ಶಿಕ್ಷಣವನ್ನು ಪಡೆಯದ ಕುಟುಂಬಗಳಲ್ಲಿ ಮತ್ತು ಬಡತನವಿರುವ ಮನೆಗಳಲ್ಲಿನ (ಗ್ರಾಮೀಣ ಹಾಗೂ ನಗರ ಪ್ರದೇಶಗಳೆರಡರಲ್ಲೂ) ಮಕ್ಕಳು, ಸಾಮಾಜಿಕವಾಗಿ ಹಿಂದುಳಿದವರು, ಅನಾರೋಗ್ಯ ಪೀಡಿತರು ಮತ್ತು ಅಸಾಮರ್ಥ್ಯವುಳ್ಳ ಮಕ್ಕಳು ಲಭ್ಯತೆಯ ಸಮಸ್ಯೆಯನ್ನು ತೀವ್ರವಾಗಿ ಎದುರಿಸುತ್ತಿದ್ದಾರೆ. ಇವರಿಗೆ ಶಿಕ್ಷಣದ ಅಗತ್ಯವು ಗರಿಷ್ಠವಾದದ್ದಾಗಿದೆ ಆದರೆ ಲಭ್ಯತೆಯ ಸಾಧ್ಯತೆ ಕನಿಷ್ಠವಾಗಿದೆ.

**ಲಭ್ಯತೆಯ ವಿಸ್ತರಿತ ನೋಟ**

ಶಾಲೆಗಳಲ್ಲಿ ದಾಖಲಾತಿ, ಅಭಿವೃದ್ಧಿಯ ಪಾಲುದಾರರು ಬಳಸುವ ಮೂಲ ಸೂಚಕಗಳು ಮತ್ತು ಸರ್ಕಾರವು ಗುರುತಿಸಿದ (ಗ್ರಾಸ್ ಎನ್ರೋಲ್ಮೆಂಟ್ ರೇಟ್ (ಜಿಇಆರ್) ದಾಖಲಾತಿಯ ಒಟ್ಟು ಪ್ರಮಾಣ ಮತ್ತು (ನೆಟ್ ಎನ್ರೋಲ್ಮೆಂಟ್ ರೇಟ್ (ಎನ್‌ಈಆರ್) ದಾಖಲಾತಿಯ ನಿವ್ವಳ ಪ್ರಮಾಣಗಳ ಮೂಲಕ ಶಿಕ್ಷಣದ ಲಭ್ಯತೆಯನ್ನು ಅನೇಕ ವೇಳೆ ತೀರ್ಮಾನಿಸಲಾಗುತ್ತದೆ. ಇವುಗಳೊಂದಿಗೆ ಐದನೆಯ ವರ್ಗದವರೆಗೆ ಉಳಿದವರು ಮತ್ತು ಪ್ರಾಥಮಿಕ ಹಂತವನ್ನು ಸಂಪೂರ್ಣಗೊಳಿಸಿದವರ ಪ್ರಮಾಣಗಳನ್ನೂ ಸಾಮಾನ್ಯವಾದ ಸೂಚಕಗಳಾಗಿ ಬಳಸಲಾಗುತ್ತದೆ.

ದಾಖಲಾತಿಯ ಈ ಸೂಚಕಗಳು ನೀಡುವ ಭೌತಿಕ ಅಸ್ತಿತ್ವದ ಅಪರಿಪೂರ್ಣ ಮಾಹಿತಿಗಿಂತ ಶಿಕ್ಷಣದ ಲಭ್ಯತೆಯು ಭಿನ್ನವಾಗಿದೆ. ಶಿಕ್ಷಣದ ಗುಣಮಟ್ಟ ಮತ್ತು ಪ್ರಕ್ರಿಯೆಯ (ಮಕ್ಕಳಿಗೆ ಏನೆಲ್ಲ ಲಭ್ಯವಾಗಿದೆ)

ನಿರ್ಣಯಗಳು ಶಿಕ್ಷಣದ ಪರಿಣಾಮಗಳನ್ನು (ಮಕ್ಕಳು ಯಾವೆಲ್ಲ ಸಾಮರ್ಥ್ಯಗಳನ್ನು ಪಡೆದುಕೊಂಡರು ಮತ್ತು ಅವುಗಳನ್ನು ಹೇಗೆ ಮೌಲ್ಯಮಾಪನ ಮಾಡಲಾಯಿತು) ಒಳಗೊಂಡಿರಬೇಕು.

ಶಿಕ್ಷಣದ ಲಭ್ಯತೆ, ಪರಿವರ್ತನೆ ಮತ್ತು ನ್ಯಾಯಸಮ್ಮತ ಸಂಶೋಧನಾ ನೆರವು ಕೂಟ **(ಕನ್ಸೋರ್ಟಿಯಮ್ ಫಾರ್ ರಿಸರ್ಚ್ ಆನ್ ಎಜುಕೇಶನಲ್ ಆಕ್ಸೆಸ್, ಟ್ರಾನ್ಸಿಶನ್ಸ್ ಅಂಡ್ ಇಕ್ವಿಟಿ – CREATE)** ಲಭ್ಯತೆಯ ವಿಸ್ತರಿತ ನೋಟವನ್ನು ಅಭಿವೃದ್ಧಿಸಿದೆ. ಇದು ಈ ಕೆಳಗಿನ ಕಾರ್ಯಕ್ರಮಗಳನ್ನು ಒಳಗೊಂಡಿರುತ್ತದೆ:

- ಸೂಕ್ತವೆನಿಸುವ ಹಂತಗಳಲ್ಲಿ ಶಾಲಾಪೂರ್ವ ಶಿಕ್ಷಣಕ್ಕೆ ಪ್ರವೇಶಾವಕಾಶದ ಲಭ್ಯತೆ.
- ಸಿಬ್ಬಂದಿವರ್ಗ, ಕಲಿಕೆಯ ಸಾಮಾಗ್ರಿಗಳು ಮತ್ತು ಇತರ ವಸ್ತುಗಳನ್ನು ಸ್ವೀಕಾರಾರ್ಹ ಮಟ್ಟಗಳಲ್ಲಿ ಹೊಂದಿರುವ ಸುರಕ್ಷಿತ ಶಾಲೆಗಳ ಸ್ಥಳೀಯ ಲಭ್ಯತೆ.
- ಶಾಲೆಗೆ ಸೇರುವ ವಯಸ್ಸು ಪ್ರಾಪ್ತವಾದ ಒಂದು ವರ್ಷದೊಳಗೆ ಪ್ರಾಥಮಿಕ ಶಾಲೆ ಅಥವಾ ಸೂಕ್ತವಾದ ಶಾಲೆಯಲ್ಲಿ ಪ್ರವೇಶಾತಿ ಹಾಗೂ ಪ್ರಗತಿ.
- ಶಾಲಾ ವರ್ಷದಲ್ಲಿ ತಪ್ಪದೆ ಹಾಜರಾಗುವುದು.
- ಮಾಧ್ಯಮಿಕ ಶಿಕ್ಷಣ ಮತ್ತು ಸಂದರ್ಭಕ್ಕೆ ತಕ್ಕಂತೆ ತರಬೇತಿಗಳ ಸಮಂಜಸವಾದ ಲಭ್ಯತೆ.
- ಕ್ರಮಬದ್ಧವಾದ ಶಿಕ್ಷಣದ ಯಶಸ್ವಿ ಪೂರ್ಣತೆಗೆ ರಾಷ್ಟ್ರ ಮಟ್ಟದ ಮಾದರಿಗಳನ್ನು ಮುಟ್ಟುವಂತಹ ಕಲಿಕೆಯ ಫಲಿತಾಂಶಗಳು.
- ಸಾರ್ವಜನಿಕ ಅನುದಾನಿತ ಶೈಕ್ಷಣಿಕ ಸೇವೆಗಳ ನ್ಯಾಯಸಮ್ಮತವಾದ ಲಭ್ಯತೆ.

ವಿಸ್ತೃತವಾದ ಈ ನೋಟವನ್ನು ರಾಷ್ಟ್ರೀಯ ಸಂದರ್ಭಗಳಿಗೆ ಸಂಬಂಧಿಸಿದಂತೆ ವ್ಯಾಖ್ಯಾನಿಸಬೇಕು. ಆರಂಭಿಕ ಹಂತಗಳು, ಒಳಗೊಳ್ಳದ ಸಮೂಹಗಳ ಸ್ವರೂಪ, ಸಂಪನ್ಮೂಲಗಳ ಲಭ್ಯತೆ ಮತ್ತು ನೀತಿಯ ಪರಿಸರವನ್ನು ಇವು ನಿರ್ಧರಿಸುತ್ತವೆ.

**ವಿಭಿನ್ನ ಆರಂಭಿಕ ಹಂತಗಳು**

ಎಲ್ಲ ಬಡ ದೇಶಗಳಲ್ಲಿಯೂ ಮೂಲ ಶಿಕ್ಷಣದ ಲಭ್ಯತೆ ಮತ್ತು ಕುಟುಂಬದ ಆದಾಯ ಪರಸ್ಪರ ಸಂಬಂಧವುಳ್ಳದ್ದಾಗಿದೆ. ಆಫ್ರಿಕಾದ ಉಪ–ಸಹಾರ (ಎಸ್ಎಸ್ಎ)ದಲ್ಲಿ ಇರುವ ೨೦% ಶ್ರೀಮಂತ ಮಕ್ಕಳು ೪೦% ಇರುವ ಬಡ ಮಕ್ಕಳಿಗಿಂತ ೯ನೆಯ ವರ್ಗವನ್ನು ತಲಪುವ ಸಾಧ್ಯತೆಯು ಸರಿಸುಮಾರು ೧೧ ಪಾಲು

ಹೆಚ್ಚು ಇದೆ. ೨೦% ಶ್ರೀಮಂತ ಮಕ್ಕಳಲ್ಲಿ ಲಿಂಗ ಭೇದವು ಮುಖ್ಯವಾಗಿರುವುದಿಲ್ಲ. ಆದರೆ ೪೦% ಬಡ ಮಕ್ಕಳಲ್ಲಿ ೫೩% ಗಂಡುಮಕ್ಕಳು ಮತ್ತು ೪೭% ಹೆಣ್ಣುಮಕ್ಕಳು ದಾಖಲಾತಿಯನ್ನು ಪಡೆಯುತ್ತಾರೆ. ತೀರ ಹದೆಗೆಟ್ಟ ಪರಿಸ್ಥಿತಿಯಲ್ಲಿ ಗಂಡು ಮತ್ತು ಹೆಣ್ಣುಮಕ್ಕಳ ಅನುಪಾತವು ೩:೧ ತಲಪುವ ಸಾಧ್ಯತೆಯೂ ಇದೆ. ನಗರದ ಮಕ್ಕಳಿಗೆ ಹೋಲಿಸಿದಾಗ ೯ನೆಯ ವರ್ಗಕ್ಕೆ ದಾಖಲಾತಿಯನ್ನು ಪಡೆಯುವ ವಿಷಯದಲ್ಲಿ ಗ್ರಾಮೀಣ ಮಕ್ಕಳು ೧೦ ಪಾಲು ಕಡಮೆ ಸಾಧ್ಯತೆಯನ್ನು ಹೊಂದಿದ್ದು ವಾಸ ಸ್ಥಳಕ್ಕಿಂತ ಕುಟುಂಬದ ಆದಾಯವೇ ಇದಕ್ಕೆ ಮುಖ್ಯವಾದ ಕಾರಣವಾಗಿದೆ.

'ಜೋಮ್ಟೀನ್ ಮತ್ತು ಡಾಕರ್‌ನ ಎಲ್ಲರಿಗೆ ಶಿಕ್ಷಣ' ಕ್ಷೇತ್ರದಲ್ಲಿ ದೇಶಗಳು ಮತ್ತು ಅಭಿವೃದ್ಧಿಯ ಪಾಲುದಾರರ ಬದ್ಧತೆಗಳ ಭಾಗಶಃ ಪರಿಣಾಮವಾಗಿ ದಕ್ಷಿಣ ಏಷ್ಯಾ ಮತ್ತು ಎಸ್.ಎಸ್.ಎ.ಗಳಲ್ಲಿ ಭಾಗವಹಿಸುವಿಕೆಯ ವಿಧಾನಗಳು ಬಹಳ ಭಿನ್ನವಾಗಿವೆ. ಸಹಜವಾಗಿಯೇ ಭಾಗವಹಿಸುವಿಕೆಯಲ್ಲಿಯೂ ಮೂರು ಮುಖ್ಯವಾದ ದರ್ಜೆಗಳಿವೆ. (ಚಿತ್ರ–೧ರಲ್ಲಿ ನೀಲಿ) ಒಂದು ಗುಂಪಿನಡಿ ಬರುವ ದೇಶಗಳಲ್ಲಿ ಬಹುತೇಕ ಎಲ್ಲ ಮಕ್ಕಳು ಒಂದನೆಯ ವರ್ಗವನ್ನು ಪ್ರವೇಶಿಸುತ್ತಾರೆ ಮತ್ತು ಆ ಮಕ್ಕಳ ಜಿಈಆರ್ ಪ್ರತಿ ವರ್ಗದಲ್ಲಿ ೧೦೦% ಇದ್ದು ಮಕ್ಕಳು ಮಾಧ್ಯಮಿಕ ಶಾಲೆಯನ್ನು ಪ್ರವೇಶಿಸುತ್ತಾರೆ. (ಚಿತ್ರ–೧ರಲ್ಲಿ ಕೆಂಪು) ಎರಡನೆಯ ಗುಂಪಿನಲ್ಲಿ ಬರುವ ದೇಶಗಳಲ್ಲಿನ ಮಕ್ಕಳಲ್ಲಿ ೧–೩ನೆಯ ವರ್ಗಕ್ಕೆ ಸೇರಬಹುದಾದ ಮಕ್ಕಳಲ್ಲಿ ಹೆಚ್ಚಿನ ಮಕ್ಕಳು ದಾಖಲಾತಿಯನ್ನು ಪಡೆಯುತ್ತಾರೆ. ಒಂದನೆಯ ವರ್ಗದ ಜಿಈಆರ್ ೨೦೦% ಅನ್ನು ಮೀರಿಸುತ್ತದೆ. ಅತಿ ಹೆಚ್ಚು ಕುಸಿತದ ಪರಿಣಾಮದಿಂದ ಆರನೆಯ ವರ್ಗಕ್ಕೆ ದಾಖಲಾತಿ ಪಡೆಯುವ ಮಕ್ಕಳ ಸಂಖ್ಯೆಯು ಆ ವರ್ಗಕ್ಕೆ ಯೋಗ್ಯವಾದ ವಯಸ್ಸಿಗಿಂತ ೫೦% ಕಡಿಮೆ ಆಗಿರುತ್ತದೆ ಮತ್ತು ಮಾಧ್ಯಮಿಕ ಶಿಕ್ಷಣದಲ್ಲಿ ೨೫% ಕಡಿಮೆ ಆಗಲೂಬಹುದು. (೧ನೆಯ ಚಿತ್ರದಲ್ಲಿ ಹಸಿರು) ಮೂರನೆಯ ವಿಭಾಗದಲ್ಲಿ ಬರುವ ದೇಶಗಳಲ್ಲಿ ಮೊದಲ ವರ್ಗಕ್ಕೆ ಪ್ರವೇಶವನ್ನು ಪಡೆಯುವ ಮಕ್ಕಳ ಸಂಖ್ಯೆಯು ಆ ದೇಶಗಳಲ್ಲಿನ ಆರು ವರ್ಷದ ಮಕ್ಕಳಿಗಿಂತ ಕಡಿಮೆ ಇರುತ್ತದೆ.

Graph

ಚಿತ್ರ ೧: ಭಾಗವಹಿಸುವಿಕೆಯ ವಿವಿಧ ನಮೂನೆಗಳು

ವಿವಿಧ ವರ್ಗಗಳಿಗೆ ಅನುಸಾರವಾದ ಭಾಗವಹಿಸುವಿಕೆಯಲ್ಲಿ ಕಂಡುಬರುವ ವಿವಿಧ ನಮೂನೆಗಳು ಪ್ರವೇಶಾತಿಯನ್ನು ಉತ್ತಮಗೊಳಿಸಲು ವಿವಿಧ ಸೂಚ್ಯಾರ್ಥಗಳನ್ನು ನೀಡುತ್ತವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಒಂದನೇ ಗುಂಪಿನ ದೇಶಗಳು ಭೌತಿಕ ಪ್ರವೇಶಾತಿಯನ್ನು ಉನ್ನತ ಮಟ್ಟದಲ್ಲಿ ಸಾಧಿಸಿವೆ ಮತ್ತು ಉತ್ತಮವಾದ ಗುಣಮಟ್ಟಕ್ಕೆ ಆದ್ಯತೆಯನ್ನು ನೀಡುವ ಅವಕಾಶವನ್ನೂ ಹೊಂದಿವೆ. ಎರಡನೆಯ

ಗುಂಪಿನ ದೇಶಗಳ ಪ್ರಾಥಮಿಕ ಹಂತದ ಜಿಈಆರ್ ೧೦೦% ಮೀರಿದ್ದರೂ ಒಂದನೆಯ ವರ್ಗದ ಪ್ರವೇಶಾತಿಯು ಅಧಿಕವಾಗಿದೆ ಮತ್ತು ಮಧ್ಯದಲ್ಲಿಯೇ ಶಾಲೆಯನ್ನು ತೊರೆಯುವವರ ಸಂಖ್ಯೆ ಬಹಳವಾಗಿದ್ದು ಪ್ರಾಥಮಿಕ ಶಿಕ್ಷಣವನ್ನು ಸಂಪೂರ್ಣಗೊಳಿಸಿದವರ ಸಂಖ್ಯೆಯು ಬಹಳ ಕಡಿಮೆ ಆಗಿದೆ. ಎಲ್ಲರಿಗೂ ಶಿಕ್ಷಣದ ಪ್ರಾಥಮಿಕ ಹಂತವನ್ನು ಸಾರ್ವತ್ರಿಕವಾಗಿಸುವ ಪ್ರಯತ್ನವನ್ನು ಹೆಚ್ಚಿನ ದೇಶಗಳು ಕೈಗೊಂಡಿವೆ. ದಾಖಲಾತಿಯನ್ನು ಸೂಚಿಸುವ ವಕ್ರ ರೇಖೆಗಳು ಒಂದನೇ ಗುಂಪಿನೊಂದಿಗೆ ಸಾಮ್ಯತೆಯನ್ನು ಹೊಂದುವಷ್ಟು ಉನ್ನತಿಯನ್ನು ಪಡೆಯಬೇಕಿದ್ದರೂ, ಹಲವಾರು ಪ್ರಸಂಗಗಳಲ್ಲಿ ಅಭಿವೃದ್ಧಿಯು ಕುಂಠಿತವಾಗಿದೆ. ಈ ದೇಶಗಳ ಪ್ರಾಥಮಿಕ ಶಾಲೆಗಳಿಗೆ ಪ್ರವೇಶಾತಿಯನ್ನು ಪಡೆದ ಮಕ್ಕಳೆಲ್ಲರೂ ಮಾಧ್ಯಮಿಕ ಶಾಲೆಯನ್ನು ಪ್ರವೇಶಿಸುವಂತಿದ್ದರೆ, ಲಭ್ಯವಿರುವ ಮಾಧ್ಯಮಿಕ ಶಾಲೆಗಳ ಸಂಖ್ಯೆಯು ಕಡಿಮೆ ಆಗಿ ಮಾಧ್ಯಮಿಕ ಶಾಲೆಗಳ ಬೇಡಿಕೆಯು ಹೆಚ್ಚಾಗಿ, ಕೈಗೆಟಕುವ ದರಗಳಲ್ಲಿ ಪ್ರವೇಶಾತಿಯನ್ನು ವಿಸ್ತರಿಸುವ ಸಾಧ್ಯತೆಯನ್ನು ಬೇಡಿಕೆಯು ಮೆಟ್ಟಿ ಹಾಕುವ ಪ್ರಸಂಗವೇ ಹುಟ್ಟಿಕೊಳ್ಳುತ್ತಿತ್ತು. ಮೂರನೆಯ ಗುಂಪಿನ ದೇಶಗಳು ಒಂದನೆಯ ವರ್ಗದ ಪ್ರವೇಶಾತಿಯನ್ನು ಸಾರ್ವತ್ರಿಕವಾಗಿಸುವಲ್ಲಿಯೇ ವಿಫಲವಾಗಿವೆ. ಕುಟುಂಬದ ಆದಾಯ, ಗ್ರಾಮೀಣ ಮತ್ತು ನಗರ ಪ್ರದೇಶಗಳು ಮತ್ತು ಲಿಂಗಭೇದಗಳ ವಿಷಯಗಳಲ್ಲಿ ಭಾಗವಹಿಸುವಿಕೆಯು ಅತ್ಯುನ್ನತ ಭಿನ್ನತೆಯನ್ನು ಹೊಂದಿವೆ. ಈ ಗುಂಪಿನ ಅನೇಕ ದೇಶಗಳು ದುರ್ಬಲವಾಗಿವೆ ಮತ್ತು ಈ ರಾಜ್ಯಗಳ ಮೂಲಸೌಕರ್ಯವೂ ಅಶಕ್ತವಾಗಿರುವುದರಿಂದ ಸಾರ್ವಜನಿಕ ಸೇವೆಗಳನ್ನು ಒದಗಿಸುವುದು ಕಷ್ಟವಾಗಿದೆ.

**ತ್ಯಜಿಸಲ್ಪಟ್ಟ ವಲಯಗಳನ್ನು ಪುನರ್‌ಕಲ್ಪಿಸುವುದು**

ಕಾರ್ಯನೀತಿಗಳ ಸಂವಾದವನ್ನು ರೂಪಿಸುವ ಉದ್ದೇಶದಿಂದ ಸಿ.ಆರ್.ಈ.ಎ.ಟಿ.ಈ. (ಕ್ರಿಯೇಟ್) ಬೇರ್ಪಡಿಸಲ್ಪಟ್ಟ ಏಳು ವಲಯಗಳನ್ನು ಗುರುತಿಸಿದೆ.

**ವಲಯ ಸೊನ್ನೆ** ಶಾಲಾಪೂರ್ವದ ಭಾಗವಹಿಸುವಿಕೆಯನ್ನು ಒಳಗೊಂಡಿದೆ. ಇದನ್ನು ಸರಿಯಾಗಿ ವಿಸ್ತರಿಸದೇ ಇದ್ದರೂ ದಾಖಲಾತಿಯು ಕಡಿಮೆ ಇರುವ ದೇಶಗಳಲ್ಲಿ ವ್ಯವಸ್ಥಿತವಾದ ಶಾಲಾಪೂರ್ವ ಅನುಭವ ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಾಗಿರುವುದಿಲ್ಲ. ದಾಖಲಾತಿಯನ್ನು ಪಡೆಯುವವರು ದುಬಾರಿಯಾದ ಖಾಸಗಿ ವ್ಯವಸ್ಥೆಗಳಲ್ಲಿ ದಾಖಲಾಗಿರುತ್ತಾರೆ. ಖಂಡಿತವಾಗಿ ಇದು ಮೂಲಭೂತ ಶಿಕ್ಷಣದ ಅವಕಾಶವನ್ನು ಬಡವರು ಕಳೆದುಕೊಳ್ಳುವಂತಾಗುತ್ತದೆ.

**ಒಂದನೆಯ ವಲಯವು** ದಾಖಲಾತಿಯನ್ನು ಕಳೆದುಕೊಂಡವರದ್ದಾಗಿದೆ. ಸಾಂಪ್ರದಾಯಿಕ ಪದ್ಧತಿಯ ಶಾಲೆಗಳನ್ನು ವಿಸ್ತರಿಸುವುದರಿಂದ ಅವಕಾಶವನ್ನು ಕಳೆದುಕೊಂಡವರಲ್ಲಿ ಈ ಮಕ್ಕಳು ಭಾಗಶಃ ಪ್ರವೇಶಾತಿಯನ್ನು ಪಡೆದರೂ ೨೦೧೫ರೊಳಗೆ ಎಲ್ಲರನ್ನೂ ಸೇರಿಸಿಕೊಳ್ಳುವುದು ಅಸಾಧ್ಯವೇ ಆಗಿದೆ.

ಅಲೆಮಾರಿ ಗುಂಪಿನವರು; ಜನಸಂಖ್ಯಾ ಸಾಂದ್ರತೆ ಕಡಿಮೆ ಇರುವ ಪ್ರದೇಶದಲ್ಲಿ ವಾಸಿಸುತ್ತಿರುವವರು; ಅತಿ ಬಡತನದಲ್ಲಿ ಇರುವವರು ಮತ್ತು ಅತಿಯಾದ ಅಂಗವೈಕಲ್ಯವಿರುವವರು ಸಾಂಪ್ರದಾಯಿಕ ಶಾಲೆಗಳಿಗೆ ಪ್ರವೇಶಾತಿಯನ್ನು ಪಡೆಯದೇ ಇರುವವರಾಗಿದ್ದಾರೆ. ಪ್ರಸ್ತುತ ಔಪಚಾರಿಕ ವ್ಯವಸ್ಥೆಯನ್ನು ವಿಸ್ತರಿಸಲು ಅಲ್ಪಾವಧಿಯಲ್ಲಿಯೇ ಅವಕಾಶಗಳಿಗಾಗಿ ಇತರ ವಿಧಾನಗಳನ್ನು ಬಳಸುವುದರ ಮುಖಾಂತರ ಒಂದನೆಯ ವರ್ಗದಿಂದ ಅವಕಾಶವನ್ನು ಕಳೆದುಕೊಂಡವರಿಗೆ ಪರಿಹಾರ ನೀಡಬಹುದಾಗಿದೆ.

**ಎರಡನೆಯ ವಲಯವು** ಪ್ರಾಥಮಿಕ ಪ್ರವೇಶಾತಿಯ ಅನಂತರ ಹೆಚ್ಚಿನ ಸಂಖ್ಯೆಯಲ್ಲಿ ಹೊರಗಿಡಲ್ಪಟ್ಟ ಮಕ್ಕಳಿಂದ ಕೂಡಿದೆ. ಸಾಮಾನ್ಯವಾಗಿ, ಆರಂಭಿಕ ಹಂತಗಳಲ್ಲಿ ಮಧ್ಯದಲ್ಲಿ ಬಿಟ್ಟುಹೋಗುವವರ ಸಂಖ್ಯೆ ಹೆಚ್ಚಾಗಿರುತ್ತದೆ. ಮಾಧ್ಯಮಿಕ ಹಂತವನ್ನು ಪ್ರವೇಶಿಸುವ ಮುನ್ನ ಒತ್ತಾಯಪೂರ್ವಕವಾಗಿ ಹೊರಹಾಕಲ್ಪಡುವ ಮಕ್ಕಳೂ ಸಾಕಷ್ಟು ಇರುತ್ತಾರೆ. ಬಿಟ್ಟುಹೋಗುವುದಕ್ಕೆ ಪೂರ್ವಕಾರಣಗಳೆಂದರೆ: ಪುನರಾವರ್ತನೆ, ಸಾಧನೆಯ ಕೊರತೆ, ಹಿಂದಿನ ದಿನಗಳಲ್ಲಿ ಅನುಭವಿಸಿದ ತಾತ್ಕಾಲಿಕ ಹಿಂಪಡೆಯುವಿಕೆ, ಹಾಜರಾತಿಯ ಕೊರತೆ, ವಯಸ್ಸು ಮೀರಿದ ನಂತರ ಪ್ರವೇಶಾತಿ ಮತ್ತು ಬೆಳವಣಿಗೆ, ಕಳಪೆ ಶಿಕ್ಷಣ, ಕೆಳಮಟ್ಟದ ವ್ಯವಸ್ಥೆಗಳು, ಬಹಳ ದೊಡ್ಡ ತರಗತಿಗಳು, ಮನೆಯ ಬಡತನ, ಬಾಲ–ಕಾರ್ಮಿಕ ಪದ್ಧತಿ, ಅನಾರೋಗ್ಯ ಮತ್ತು ಅಪೌಷ್ಟಿಕತೆ. ಹೆಚ್ಚಿನ ಸಂದರ್ಭಗಳಲ್ಲಿ ಬಿಟ್ಟುಹೋಗುವವರಿಗೆ ಮರು–ಪ್ರವೇಶ ಪಡೆಯುವ ಮಾರ್ಗಗಳೇ ಇರುವುದಿಲ್ಲ. ಸಮಾನುಪಾತವಾಗಿಲ್ಲದ ಹೆಣ್ಣುಮಕ್ಕಳ ಸಂಖ್ಯೆ, ಎಚ್‌ಐವಿ/ಏಡ್ಸ್ ಉಳ್ಳ ಅನಾಥರು ಮತ್ತು ಅಸಹಾಯಕ ಸ್ಥಿತಿಯಲ್ಲಿರುವವರೂ ಇದೇ ವಲಯಕ್ಕೆ ಸೇರಿದವರಾಗಿದ್ದಾರೆ. ಇದಕ್ಕೆ ಬಾಲ ಕಾರ್ಮಿಕ ಪದ್ಧತಿಯ ಪ್ರಭಾವವೂ ಕಾರಣವಾಗಿರಬಹುದು.

**ಮೂರನೆಯ ವಲಯವು** ಪ್ರವೇಶಾತಿ ಪಡೆದ ಅನಂತರವೂ ಬಿಟ್ಟುಹೋಗಬಹುದಾದ ಅಪಾಯದಲ್ಲಿರುವವರದ್ದಾಗಿದೆ. ಈ ಮಕ್ಕಳು ಹೆಚ್ಚಾಗಿ ಗೈರುಹಾಜರಾದವರು, ಪುನರಾವರ್ತಿತರು, ಸಾಧನೆಯು ಕೆಳಮಟ್ಟದಲ್ಲಿರುವವರು ಮತ್ತು ಅನೇಕ ವೇಳೆ ವಯಸ್ಸು ಮೀರಿದವರಾಗಿರುತ್ತಾರೆ. ಔಪಚಾರಿಕವಾಗಿ ದಾಖಲಾತಿ ಪಡೆದಿದ್ದರೂ, ಅವರ ಹಾಜರಾತಿ ವಿರಳವಾಗಿದ್ದರೆ, ಆ ಮಕ್ಕಳು ಸದ್ದಿಲ್ಲದೇ ಹೊರಗೆ ಉಳಿದುಬಿಡುತ್ತಾರೆ. ಏಕೆಂದರೆ, ಸಮಾಜೋ–ಸಾಂಸ್ಕೃತಿಕ ಕಾರಣಗಳಿಂದ ತಾರತಮ್ಯವನ್ನು ಅನುಭವಿಸಿದವರು ಅಥವಾ ಶಾಲೆಗೆ ಹಾಜರಾಗದೇ ಇರುವುದರಿಂದ ಪಠ್ಯಕ್ರಮವನ್ನು ಅನುಸರಿಸುವಲ್ಲಿ ಅಶಕ್ಯರಾಗಿ ಅವರ ಸಾಧನೆಯು ಕೆಳಮಟ್ಟದಲ್ಲಿ ಉಳಿದುಬಿಡುತ್ತದೆ. ಪೌಷ್ಟಿಕತೆಯ ಕೊರತೆ ಮತ್ತು ಅನಾರೋಗ್ಯದ ಕಾರಣಗಳು ಈ ಸಮಸ್ಯೆಯನ್ನು ಉಲ್ಬಣಗೊಳಿಸಬಲ್ಲವು. ಹಾಗೂ ಮನೆಯೊಳಗೆ ಮಕ್ಕಳ ನಡುವೆ ಪಾಲಕರು ತೋರುವ ತಾರತಮ್ಯದ ಪರಿಣಾಮದಿಂದ ಕೆಲವರು ಶಿಕ್ಷಣದ ಲಾಭ ಪಡೆದು ಉಳಿದ ಮಕ್ಕಳು ಶಾಲೆಗಳಿಂದ ಹೊರಗುಳಿಯುವುದೂ ಈ ಸಮಸ್ಯೆಯನ್ನು ಹೆಚ್ಚಿಸುತ್ತದೆ.

**ನಾಲ್ಕನೆಯ ವಲಯ**ದಲ್ಲಿನ ಮಕ್ಕಳು ಹಿರಿಯ ಪ್ರಾಥಮಿಕ ಶಿಕ್ಷಣದ ಅವಕಾಶದಿಂದ ವಂಚಿತರಾಗಿರುತ್ತಾರೆ. ಆಯ್ಕೆಯಾಗದಿರುವುದು ಅಥವಾ ಶಿಕ್ಷಣದ ವೆಚ್ಚ ಭರಿಸಲಾಗದಿರುವುದು ಅಥವಾ ಪ್ರಾಥಮಿಕ ಶಿಕ್ಷಣದ ಪೂರೈಕೆಯ ಅನಂತರ ಬಿಟ್ಟುಹೋಗುವುದು ಇದಕ್ಕೆ ಕೆಲವು ಕಾರಣಗಳಾಗಿವೆ. ಪ್ರೌಢ ಶಿಕ್ಷಣದಿಂದ ಹೊರಗೆ ಉಳಿದುಬಿಡುವ ಈ ಸ್ಥಿತಿಯು ಮುಖ್ಯವಾದದ್ದಾಗಿದೆ. ಪ್ರೌಢ ಶಿಕ್ಷಣದ ಕಡೆಗೆ ಪರಿವರ್ತನೆಯ ಕೊರತೆಯು ಪ್ರಾಥಮಿಕ ಶಿಕ್ಷಣದ ಮೇಲೆ ಪರಿಣಾಮ ಬೀರುತ್ತದೆ. ಪ್ರೌಢ ಶಿಕ್ಷಣದ ಅವಶ್ಯಕತೆಯ ಹಂತದಲ್ಲಿ ಲಿಂಗ ಸಮಾನತೆಯು ಪ್ರಾಥಮಿಕ ಹಂತದಲ್ಲಿನ ಸಮಾನತೆಯನ್ನು ಅವಲಂಬಿಸಿದೆ. ಪ್ರೌಢಶಿಕ್ಷಣವನ್ನು ಪಡೆದವರು ಹೆಚ್ಚು ವೇತನ ಒದಗಿಸುವ ಉದ್ಯೋಗದ ಮೂಲಕ ಬಡತನದಿಂದ ಹೊರಬಂದು ಉತ್ತಮ ಜೀವನದೆಡೆಗೆ ಅವಕಾಶಗಳನ್ನು ಪಡೆಯುತ್ತಾರೆ.

**ಐದನೆಯ ವಲಯ**ವು ಹಿರಿಯ ಪ್ರಾಥಮಿಕ ಶಿಕ್ಷಣಕ್ಕೆ ದಾಖಲಾತಿಯನ್ನು ಪಡೆದಿದ್ದರೂ ಶಿಕ್ಷಣವನ್ನು ಪೂರ್ಣಗೊಳಿಸುವಲ್ಲಿ ವಿಫಲರಾದ ಮಕ್ಕಳದ್ದಾಗಿದೆ. ಇಂದು ಹೆಚ್ಚಿನ ದೇಶಗಳಲ್ಲಿ ಹಿರಿಯ ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಶಿಕ್ಷಣದ ಭಾಗವೆಂದು ಪರಿಗಣಿಸಲಾಗಿದೆ. ತಮ್ಮ ವಯಸ್ಸಿಗೆ ತಕ್ಕ ವರ್ಗಗಳಲ್ಲಿ ಅಧ್ಯಯನ ಮಾಡುತ್ತಿರುವ ಮಕ್ಕಳು ಅಧ್ಯಯನದ ಪರಿಪೂರ್ಣತೆಯಲ್ಲಿ ವಿಫಲರಾದಾಗ ನ್ಯಾಯೋಚಿತವಾಗಿ ಉದ್ಯೋಗಾರ್ಹತೆಯನ್ನು ಪಡೆಯಲು ಬೇಕಾದ ವಯಸ್ಸಿಗಿಂತ ಚಿಕ್ಕವರಾಗಿರುವ ಸಾಧ್ಯತೆಯೇ ಹೆಚ್ಚು. ಇವರು ಶಾಲೆ ಬಿಡುವುದಕ್ಕೆ ಮುಖ್ಯ ಕಾರಣಗಳೇನೆಂದರೆ ಕಳಪೆ ಪ್ರದರ್ಶನ, ಆರ್ಥಿಕ ಸಾಮರ್ಥ್ಯ ಮತ್ತು ಆಸಕ್ತಿಯ ಕೊರತೆ. ಉದ್ಯೋಗ ಕ್ಷೇತ್ರದಲ್ಲಿ ಹೆಚ್ಚಿನ ಅವಕಾಶಗಳ ಲಭ್ಯತೆಯಿಂದಾಗಿ ಶಾಲೆಯಲ್ಲಿ ಉಳಿದುಕೊಳ್ಳುವ ಬೇಡಿಕೆ ದುರ್ಬಲವಾಗುತ್ತದೆ.

**ಆರನೆಯ ವಲಯ**ವು ಹಿರಿಯ ಪ್ರಾಥಮಿಕ ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸಿಯೂ ಹೊರಬೀಳುವ ಸಾಧ್ಯತೆಯುಳ್ಳ ಮಕ್ಕಳದ್ದಾಗಿದೆ. ಮೂರನೆಯ ವಲಯದಲ್ಲಿನ ಮಕ್ಕಳಂತೆಯೇ ದಾಖಲಾತಿಯನ್ನು ಪಡೆದಿದ್ದರೂ ಕಡಿಮೆ ಹಾಜರಾತಿ ಮತ್ತು ಸಾಧನೆಯ ಕೊರತೆಗಳಿಂದಾಗಿ ಸದ್ದಿಲ್ಲದೇ ಹೊರದೂಡಲ್ಪಟ್ಟಿರುತ್ತಾರೆ. ಶಿಕ್ಷಣದ ವೆಚ್ಚ ಮತ್ತು ಆರ್ಥಿಕ ಅಸಮರ್ಥನೀಯತೆಯೂ ದಾಖಲಾಗಲು ಪ್ರೋತ್ಸಾಹದಾಯಕಗಳಾಗಿರುವುದಿಲ್ಲ.

ಚಿತ್ರ ೨: ತ್ಯಜಿಸಲ್ಪಟ್ಟ ವಲಯಗಳು

**ತ್ಯಜಿಸುವಿಕೆಯನ್ನು ವಿವರಿಸುವುದು**

ಶಿಕ್ಷಣವನ್ನು ತ್ಯಜಿಸುವುದಕ್ಕೆ ಹಲವಾರು ಕಾರಣಗಳಿವೆ ಮತ್ತು ಇವು ಹೊರದೂಡುವ ಮತ್ತು ಒಳತಳ್ಳುವ ಕಾರಣಗಳಿಂದಾಗಿ ಸಂಭವಿಸುತ್ತವೆ. ಪ್ರವೇಶಾತಿಯನ್ನು ಉತ್ತಮವಾಗಿ ಉಳಿಸಿಕೊಳ್ಳುವುದು ಹೇಗೆಂದು ಅರ್ಥಮಾಡಿಕೊಳ್ಳಲು ಅವಕಾಶ ಮತ್ತು ಆಯ್ಕೆಗಳನ್ನು ಪ್ರಭಾವಿಸುವ ಪೂರೈಕೆ ಮತ್ತು ಬೇಡಿಕೆ, ಈ ಎರಡನ್ನು ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ. ಶಾಲೆಗೆ ಪ್ರವೇಶಾತಿಯನ್ನು ಒದಗಿಸುವಿಕೆಯ ಸಮಸ್ಯೆಯೆಂದು ಬಿಂಬಿಸಲಾಗಿದ್ದರೂ ವಿಶೇಷವಾಗಿ ಹಿರಿಯ ಮಕ್ಕಳಲ್ಲಿ ಬೇಡಿಕೆಯು ಶಿಕ್ಷಣದ ಘನತೆಯನ್ನು ನಿರ್ಧರಿಸುತ್ತದೆ ಎಂಬುದು ಸ್ಪಷ್ಟವಾಗುತ್ತಿದೆ. ಪೂರೈಕೆ ಮತ್ತು ಬೇಡಿಕೆ ಅರ್ಥವತ್ತಾದ ಮತ್ತು ನ್ಯಾಯಸಮ್ಮತವಾದ ಪ್ರವೇಶಾತಿಯನ್ನು ರೂಪಿಸುವಂತಹ ಐದು ಕಾರ್ಯಕ್ಷೇತ್ರಗಳನ್ನು ಕ್ರಿಯೇಟ್ ಗುರುತಿಸಿದೆ.

ಮೊದಲನೆಯದು, ಶಾಲೆಯ ಗುಣಮಟ್ಟದ ವಾಸ್ತವತೆ ಮತ್ತು ಗ್ರಹಿಕೆ, ಪ್ರಕ್ರಿಯೆ ಮತ್ತು ಪರಿಣಾಮಗಳು ಭಾಗವಹಿಸುವಿಕೆಯನ್ನು ಕುರಿತ ನಿರ್ಧಾರಗಳನ್ನು ಸೂಚಿಸುತ್ತವೆ. ಶಾಲೆಗಳನ್ನು ಕಲಿಕೆಯ ಸ್ಥಳಗಳೆಂದು ಪರಿಗಣಿಸಬೇಕು. ಇವು ಸ್ವಾಗತಿಸುವ, ಬೆಂಬಲಿಸುವ ಮತ್ತು ಸಾಮರ್ಥ್ಯವನ್ನು ಪೋಷಿಸಿ ಮೌಲ್ಯಯುತವಾದ ಸಾಧನೆಗೆ ಸಹಕಾರಿಯಾಗುವ ಕ್ಷೇತ್ರಗಳೆಂದು ತಿಳಿಯಬೇಕು. ದತ್ತ ಮಾಹಿತಿಗಳ ಪೂರೈಕೆ ಭಾಗದ ಅಂಶಗಳು – ಅರ್ಹ ಮತ್ತು ಸ್ವಯಂ ಸ್ಫೂರ್ತಿಯುಳ್ಳ ಶಿಕ್ಷಕರು, ಕಲಿಕೆಯ ವಸ್ತುಗಳು, ಸೂಕ್ತ ಸೌಕರ್ಯಗಳು ಇಲ್ಲಿ ಅತ್ಯಗತ್ಯವಾಗಿವೆ. ಅಂತೆಯೇ ಶಾಲೆಗಳು ಏನನ್ನು ಒದಗಿಸುತ್ತವೆ ಎಂಬುವುದರ ಮೌಲ್ಯ ಮಾಪನವನ್ನು ಬಿಂಬಿಸುವ ವಿಷಯಗಳು ಬೇಡಿಕೆಯ ವಿಭಾಗದ್ದಾಗಿವೆ. ವಸ್ತುರೂಪದ ದತ್ತ ಮಾಹಿತಿಗಳು ಸಾಕಷ್ಟು ಇದ್ದರೂ ಶಿಕ್ಷಣದ ಪ್ರಸ್ತುತತೆ ಕಡಿಮೆ ಎಂದು ಪರಿಗಣಿಸಿದಾಗ ಬೇಡಿಕೆಯೂ ಕುಂಠಿತವಾಗಬಹುದು.

ಎರಡನೆಯದು, ಮೂಲಭೂತ ಶಿಕ್ಷಣದ ಬೆಂಬಲಕ್ಕೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಸ್ಥಳೀಯ ಮತ್ತು ಜಿಲ್ಲಾಮಟ್ಟದ ಶೈಕ್ಷಣಿಕ ಆಡಳಿತಗಳು ಒದಗಿಸುತ್ತವೆ. ಇದು ಪ್ರಬಲ ಪೂರೈಕೆಯ ಗುಣಗಳುಳ್ಳದ್ದಾಗಿದೆ. ಸಾರ್ವಜನಿಕ ವ್ಯವಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಜವಾಬ್ದಾರಿಯ ಮೂಲವು ವಿಭಾಗೀಯ/ಜಿಲ್ಲಾ ಮಟ್ಟದ/ನಿರ್ದಿಷ್ಟ ವಲಯದ ಶೈಕ್ಷಣಿಕ ಕಚೇರಿಗಳು, ಶಾಲೆಗಳ ಆಡಳಿತ ಮಂಡಳಿಗಳು ಮತ್ತು ಸ್ಥಳೀಯ ಶೈಕ್ಷಣಿಕ ಮಂಡಳಿಗಳಾಗಿದೆ. ರಾಜ್ಯವನ್ನು ಪ್ರತಿನಿಧಿಸುವ ನಿಯೋಗಿಗಳ ಕಾರ್ಯಗಳು ಲಭ್ಯತೆ ಮತ್ತು ಸಂವರ್ಧನೆಯನ್ನು ರೂಪಿಸುತ್ತವೆ.

ಮೂರನೆಯದು, ಸಮುದಾಯ ಮಟ್ಟದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಂಶಗಳು ಶೈಕ್ಷಣಿಕ ಅವಕಾಶಗಳನ್ನು ಆವರಿಸಿವೆ. ನಿರಂತರ ದಾಖಲಾತಿ ಮತ್ತು ಗುಣಮಟ್ಟದ ಸುಧಾರಣೆಗೆ ಅಗತ್ಯವಾದ ಬೆಂಬಲವನ್ನು ವಸ್ತುರೂಪದಲ್ಲಿ ಮತ್ತು ಅಮೂರ್ತರೂಪದಲ್ಲಿ ಒದಗಿಸುವವು ಮತ್ತು ಶೈಕ್ಷಣಿಕ ಲಭ್ಯತೆಯನ್ನು ರೂಪಿಸುವವು ಮಹತ್ವಾಕಾಂಕ್ಷೆ ಮತ್ತು ನಿರೀಕ್ಷೆ, ನಾಯಕತ್ವ ಗುಣ ಮತ್ತು (ರೋಲ್ ಮಾಡೆಲ್) ಆದರ್ಶ

ಮಾದರಿಗಳು. ಸ್ಥಳೀಯ ಸಮುದಾಯಗಳ ಆರ್ಥಿಕ ಮೂಲವು ಸಂಪನ್ಮೂಲಗಳನ್ನು ನಿರ್ಬಂಧಿಸುವ ಅಥವಾ ಒದಗಿಸುವ ಮೂಲಕ ಭಾಗವಹಿಸುವಿಕೆಯಲ್ಲಿ ಜೀವನಕ್ರಮ ಮತ್ತು ಉದ್ಯೋಗಾವಕಾಶಗಳಿಂದ ಉಂಟಾಗುವ ಅಡ್ಡಿಗಳನ್ನು ಗುರುತಿಸುತ್ತವೆ. ಪೂರೈಕೆಗಳು ಮತ್ತು ಬೇಡಿಕೆಗಳು ಸಮುದಾಯ ಹಂತದ ಕಾರ್ಯಗಳಿಂದ ಪ್ರಭಾವಿಸಲ್ಪಟ್ಟಿವೆ.

ನಾಲ್ಕನೆಯದು, ಕುಟುಂಬದ ಗುಣಲಕ್ಷಣಗಳು ಮತ್ತು ಮೂಲಭೂತ ಶಿಕ್ಷಣದಲ್ಲಿ ಪಾಲ್ಗೊಳ್ಳಲು ಮನೆಯವರು ಆಯ್ದುಕೊಳ್ಳುವ ಸಂಸ್ಥೆಗಳೂ ಆಯ್ಕೆಗಳನ್ನು ಪ್ರಭಾವಿಸುತ್ತವೆ. ದಾಖಲಾತಿ, ನಿರಂತರತೆ ಮತ್ತು ಪೂರ್ಣಗೊಳ್ಳುವ ಮೊದಲೇ ಬಿಟ್ಟುಹೋಗುವುದನ್ನು ಪ್ರಭಾವಿಸುವಲ್ಲಿ ಮುಖ್ಯವಾದವುಗಳು – ಶಾಲೆಯ ಹಾಜರಾತಿಯ ವಿಷಯದಲ್ಲಿ ಮನೆಮಂದಿಯ ನಿರ್ಧಾರಗಳು ಮತ್ತು ಶಾಲೆಗಳು ಒದಗಿಸಬಲ್ಲ ಜ್ಞಾನ ಮತ್ತು ಕೌಶಲಗಳಿಂದ ಲಾಭ ಪಡೆಯಬಹುದಾದ ಕೌಟುಂಬಿಕ ಯೋಜನೆಗಳು. ಕುಟುಂಬಗಳ ಸಾಂಸ್ಕೃತಿಕ ಕೇಂದ್ರ ಮತ್ತು ಕುಟುಂಬಗಳು ವ್ಯಕ್ತಪಡಿಸುವ ಆಯ್ಕೆಗಳೂ ಕೂಡ ಶಾಲೆಗಳ ಬೇಡಿಕೆಯನ್ನು ಪ್ರಭಾವಿಸುತ್ತವೆ.

ಐದನೆಯದು, ಕಲಿಯುವವರ ವೈಯಕ್ತಿಕ ಗುಣಲಕ್ಷಣಗಳೂ ಮುಖ್ಯವಾಗಿವೆ. ಕಲಿಕೆಯಲ್ಲಿ ತೊಡಗಿದವರ ಸ್ವಭಾವ, ಸಾಮರ್ಥ್ಯ ಮತ್ತು ಸಂಸ್ಥೆಗಳು ಅವರವರ ಕಲಿಕೆಗೆ ಒದಗಿಸುವ ಪ್ರೇರಣೆ, ಕಲಿಕೆಯ ಚಟುವಟಿಕೆಗಳಲ್ಲಿ ತೊಡಗುವಿಕೆಗಳೂ ಕಲಿಕೆಯ ಮೇಲೆ  ಪರಿಣಾಮ ಬೀರುತ್ತವೆ. ಮೂಲಭೂತ ಶಿಕ್ಷಣವು ಶಿಶು ಕೇಂದ್ರಿತವಾಗಿದ್ದಷ್ಟು ಒಳ್ಳೆಯದು. ಹೀಗಿದ್ದಲ್ಲಿ, ಕಲಿಯುವ ಮಕ್ಕಳು ಶಾಲೆಗೆ ಏನನ್ನು ತರುತ್ತಾರೆ ಎನ್ನುವುದನ್ನು ಅರ್ಥಮಾಡಿಕೊಳ್ಳಲು ಮತ್ತು ಕಠಿಣವೆನಿಸುವ ಕಲಿಕೆಯ ವಿವಿಧ ರೂಪಗಳು ಮತ್ತು ವಿಷಯಗಳನ್ನು ಶಾಲೆಯು ಹೇಗೆ ನಿಭಾಯಿಸುತ್ತದೆ ಎನ್ನುವುದನ್ನೂ ಅರ್ಥಮಾಡಿಕೊಳ್ಳುವುದು ಸಾಧ್ಯವಾಗುತ್ತದೆ. ನಿರಂತರವಾದ ಭಾಗವಹಿಸುವಿಕೆಯು ಕಲಿಕೆಯಲ್ಲಿ ತೊಡಗಿದವರ ಗುಣಲಕ್ಷಣಗಳ ವಾಸ್ತವಿಕತೆಯನ್ನು ಅವಲಂಬಿಸಿದೆ. ವಿಶೇಷವಾಗಿ ಹಿರಿಯ ಮಕ್ಕಳು ತಮ್ಮದೇ ಆದ ಪ್ರತ್ಯೇಕ ಕಾರ್ಯಸೂಚಿಯನ್ನು ಹೊಂದಿರುತ್ತಾರೆ. ಅದು ಅರ್ಥಪೂರ್ಣವಾದ ಕಲಿಕೆಯು ಯಾವ ಮಟ್ಟದವರೆಗೆ ಸಾಧ್ಯವಿದೆ ಎಂದು ತಿಳಿದುಕೊಳ್ಳುತ್ತದೆ ಮತ್ತು ಅರ್ಥಪೂರ್ಣ ಕಲಿಕೆಯನ್ನು ಬೇಡುತ್ತದೆ.

ಭಾಗವಹಿಸುವಿಕೆ ಮತ್ತು ಕಲಿಕೆಯ ಪರಿಣಾಮಗಳ ಉತ್ತಮವಾದ ಹಂಚಿಕೆಗಳು ನ್ಯಾಯಸಮ್ಮತ ಅಗತ್ಯಗಳು ಮತ್ತು ಅರ್ಥಪೂರ್ಣ ಲಭ್ಯತೆಯನ್ನು ಪಡೆಯಲು ಅವಶ್ಯಕವಾಗಿವೆ.  ಅಗತ್ಯವಾದ ಅರ್ಥಪೂರ್ಣವಾದ ಪ್ರವೇಶಾತಿಯಿಂದ  ಆರ್ಥಿಕ ಬೆಳವಣಿಗೆ ಮತ್ತು ಮಾನವ ಸಾಮರ್ಥ್ಯಗಳ ಗುರುತಿಸುವಿಕೆಯನ್ನು ಬೆಂಬಲಿಸಲು, ಸಾಮಾಜಿಕ ಚಲನೆ ಮತ್ತು ಬಡತನ ನಿವಾರಿಸಲು ಉನ್ನತ ಮಟ್ಟದ ಸಾಮರ್ಥ್ಯದತ್ತ ಪರಿವರ್ತನೆಗಳು ಸಾಧ್ಯವಾಗುತ್ತವೆ.

ಚಿತ್ರ ೩: ತ್ಯಜಿಸುವಿಕೆಯನ್ನು ಪರಿಚಯಿಸುವುದು

**ನೀತಿನಿಯಮದ ಕೆಲವು ಪರಿಣಾಮಗಳು**

- ಪ್ರವೇಶಾತಿಯ ಗುರಿಗಳತ್ತ ಇರುವ ಕೇಂದ್ರಿಕರಣದ ಸಂಕುಚಿತತೆಯನ್ನು ನಿರುತ್ಸಾಹಗೊಳಿಸಲು ಲಭ್ಯತೆಯ ವಿಸ್ತೃತವಾದ ನೋಟದ ಅಗತ್ಯವಿದೆ. ಇದು ಸ್ವತಂತ್ರ ಗುಣಮಟ್ಟವನ್ನು ಹೊಂದಿರಬೇಕು.
- ದೇಶದಿಂದ ದೇಶಕ್ಕೆ ಆರಂಭಿಕ ಹಂತಗಳು ವ್ಯಾಪಕವಾಗಿ ಬದಲಾಗುತ್ತವೆ. ಉತ್ತಮಗೊಳಿಸಲಾದ ಲಭ್ಯತೆಯ ಯಾವ ಅಂಶಗಳು ಮುಖ್ಯವೆಂಬುದನ್ನು ಈ ಆರಂಭಿಕ ಹಂತಗಳು ನಿರ್ಧರಿಸುತ್ತವೆ.
- ಕಡಿಮೆ ಪ್ರವೇಶಾತಿಯುಳ್ಳ ಬಹುಪಾಲು ದೇಶಗಳಲ್ಲಿ ಬಡತನ ಮತ್ತು ತ್ಯಜಿಸುವಿಕೆಗಳು ಪರಸ್ಪರಸಂಬಂಧವನ್ನು ಹೊಂದಿರುತ್ತವೆ. ಇತರ ಸಂದರ್ಭಗಳಲ್ಲಿ ಸ್ಥಳೀಯ ಪರಿಸ್ಥಿತಿಗಳೂ ಪ್ರಾಮುಖ್ಯತೆಯನ್ನು ಹೊಂದಿರುತ್ತವೆ.
- ವಿಭಿನ್ನ ಗುಣಲಕ್ಷಣದಿಂದ ಕೂಡಿರುವ ತ್ಯಜಿಸುವಿಕೆಯ ಏಳು ವಿಭಿನ್ನ ವಲಯಗಳನ್ನು ಗುರುತಿಸಬಹುದಾಗಿದೆ.
- ತ್ಯಜಿಸುವಿಕೆಯ ಪ್ರತಿಯೊಂದು ವಲಯದಲ್ಲಿ ತ್ಯಜಿಸುವಿಕೆಯನ್ನು ನಿವಾರಿಸಿ ಅರ್ಥಬದ್ಧವಾದ ಲಭ್ಯತೆಯನ್ನು ಪ್ರಾಯೋಜಿಸಲು ವಿವಿಧ ಕಾರ್ಯತಂತ್ರಗಳ ಅಗತ್ಯವಿದೆ. ಪ್ರತಿಯೊಂದು ವಲಯಕ್ಕೂ ಸಂದರ್ಭಕ್ಕೆ ತಕ್ಕಂತಹ ಭಿನ್ನ ರೀತಿಯ ನೀತಿನಿಯಮಗಳ ಸಂವಾದದ ಅಗತ್ಯವಿದೆ.
- ಲಭ್ಯತೆಯನ್ನು ಉತ್ತಮಗೊಳಿಸಲು ಪೂರೈಕೆ ಮತ್ತು ಬೇಡಿಕೆಗಳ ಎರಡೂ ಕಡೆಯಿಂದ ಕಾರ್ಯನಿರ್ವಹಣೆಯ ಅಗತ್ಯವಿದೆ. ಹಾಗೂ ಶಾಲೆಗಳು, ಸ್ಥಳೀಯ ಶೈಕ್ಷಣಿಕ ಸಂಸ್ಥೆಗಳು, ಸಮುದಾಯಗಳು, ಕುಟುಂಬಗಳ ಮತ್ತು ವ್ಯಕ್ತಿಗಳಿಗೆ ಸಂಬಂಧಿಸಿದ ಸಂಸ್ಥೆಗಳ ನಡುವಿನ ಅಂತರ್ಸಂಬಂಧವನ್ನು ಗುರುತಿಸುವುದೂ ಅಗತ್ಯವಾಗಿದೆ.

***

**ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸೂಚಿಸಿದ ಲೇಖನವನ್ನು ಓದಿ:**

ಲೆವಿನ್ ಕೆ.ಎಮ್. (೨೦೦೭) *ಇಂಪ್ರೂವಿಂಗ್ ಆಕ್ಸೆಸ್, ಇಕ್ವಿಟಿ ಅಂಡ್ ಟ್ರಾನ್ಸಿಶನ್ಸ್ ಇನ್ ಎಜುಕೇಶನ್; ಕ್ರಿಯೇಟಿಂಗ್ ಎ ರಿಸರ್ಚ್ ಅಜೆಂಡಾ.* ಕ್ರಿಯೇಟ್ ಪಾತ್ವೇಸ್ ಟು ಆಕ್ಸೆಸ್ ರಿಸರ್ಚ್ ಮೊನೊಗ್ರಾಫ್ ಸಂ.೧. www.create-rcp.org. ಇಲ್ಲಿ ಲಭ್ಯವಿದೆ.